# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 13-12-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜೋಳದ ದರ ಹೆಚ್ಚಳ

ಖಾರೀಫ್ ಬೆಳೆಯ ಉತ್ಪಾದನೆ ಇಳಿಕೆ ಹಾಗೂ ಅಧಿಕ ಬೇಡಿಕೆಯಿಂದ ದೇಶೀ ಜೋಳ ದರ ಹಿಂದಿನ ವರ್ಷ ಈ ಸಮಯದಲ್ಲಿದ್ದ ದರಕ್ಕಿಂತ ಗಣನೀಯ ಹೆಚ್ಚಳ ಕಂಡಿದ್ದು, ಜೋಳ ಅವಶ್ಯಕ ವಸ್ತುಗಳ ಪರಿಧಿಯಲ್ಲಿಲ್ಲದಿರುವುದರಿಂದ ಅದರ ರಫ್ತು ನಿಷೇಧ ಸಾಧ್ಯತೆ ಕಡಿಎಮಯೆನ್ನಲಾಗಿದೆ. ಈಗ ರಾಬಿ ಬೆಳೆಯ ಜೋಳ ಬಿತ್ತನೆ ಹಿಂದಿನ ವರ್ಷ ಈ ಅವಧಿಯಲ್ಲಾದ ಬಿತ್ತನೆಗಿಂತ ಗಣನೀಯ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಈ ವರ್ಷದ ರಾಬಿ ಬೆಳೆಯ ಉತ್ಪಾದನೆ ಗಣನೀಯ ಹೆಚ್ಚಳ ಕಾಣುವ ನಿರೀಕ್ಷೆಯಿದೆ. ಮುಂಬರುವ ತಿಂಗಳುಗಳಲ್ಲಿ ಭಾರತದ ಜೋಳಕ್ಕೆ ರಫ್ತು ಬೇಡಿಕೆ ಅಧಿಕವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಈ ವರ್ಷದ ಖಾರೀಫ್ ಬೆಳೆಯ ದೇಶೀ ಉತ್ಪಾದನೆ ಸ್ವಲ್ಪ ಮಟ್ಟದ (2 ಶೇಕಡಾ) ಹಿಂದಿನ ವರ್ಷದ 21.77 ಟನ್ ಬದಲಾಗಿ ಈ ವರ್ಷ 21.31 ಮಿಲಿಯನ್ ಟನ್) ಇಳಿಕೆಯಾದರೂ ಪೂರೈಕೆಯಲ್ಲಿ ಹೆಚ್ಚಿನ ಕೊರತೆಯಾಗುತ್ತಿಲ್ಲವೆನ್ನಲಾಗಿದೆ.

## ಬಾಂಗ್ಲಾ ದಿಂದ ಭಾರತದ 5 ಲಕ್ಷ ಟನ್ ಪಾರಾಬಾಯಿಲ್ಡ್ ಅಕ್ಕಿಗೆ ಬೇಡಿಕೆ

ಬಾಂಗ್ಲಾದೇಶ 5 ಲಕ್ಷ ಟನ್ ಭಾರತದ ಪಾರಾಬಾಯಿಲ್ಡ್ ಅಕ್ಕಿಗೆ ಭಾರತ ಸರಕಾರಕ್ಕೆ ಬೇಡಿಕೆ ಸಲ್ಲಿಸಿದೆಯೆನ್ನಲಾಗಿದೆ.

## ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಹೆಚ್ಚಳ

ಇಂದೋರ್ ಮಾರುಕಟ್ಟೆಯಲ್ಲಿ ಮಿಲ್‌ಗಳಿಂದ ಅಧಿಕ ಬೇಡಿಕೆಯಿಂದ ಸೋಯಾಬೀನ್ ದರ ಕ್ವಿಂ.ಗೆ ರೂ 100 ಹೆಚ್ಚಳವಾಗಿದೆ. ಆದರೂ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಈಗ ದರ ಕಡಿಮೆಯಿದೆ. ಅಧಿಕ ಬಳಕೆ,ಅರೆಯುವಿಕೆಗೆ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗುತ್ತಿದ್ದು, ಹಿಂದಿನ ವರ್ಷಕ್ಕಿಂತ ಈ ವರ್ಷ ಸೋಯಾಬೀನ್ ಲಭ್ಯತೆ ಹೆಚ್ಚಳವಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಕುಸಿತ

ಇಂದಿನ ಪ್ರಥಮ ಹಂತದ ವ್ಯವಹಾರದಲ್ಲಿ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 4.51 ಶೇಕಡಾ ಇಳಿಕೆಯಾಗಿ ಟನ್ ಗೆ 3815 ರಿಂಗಿಟ್ಸ್ ($ 863.12) ಗೆ ಕುಸಿತವಾಗಿದೆ. ಚೈನಾದ ದುಯಿನ್ ಮಾರುಕಟ್ಟೆಯಲ್ಲಿ ಸೋಯಾ ಎಣ್ಣೆ ದರ 3.07 ಶೇಕಡಾ ಹಾಗೂ ಪಾಮೆಣ್ಣೆ ದರ 6.16 ಶೇಕಡಾ ಇಳಿಕೆಯಾಗಿದೆ ಹಾಗೂ ನ್ಯೂಯಾರ್ಕನಲ್ಲೂ ಸೋಯಾಎಣ್ಣೆ ದರ ಇಳಿಕೆಯಾಗಿದೆ. ಡಿಸೆಂಬರ್ 1–10 ರ ತನಕದ ಮಲೇಶಿಯನ್ ಪಾಮೆಣ್ಣೆ ರಫ್ತು 6 ಶೇಕಡಾ ಸಮೀಪ ಹೆಚ್ಚಳವಾದರೂ ಫ್ಯೂಚರ್ ದರ ಕುಸಿತ ಕಂಡಿದೆ. ಹಿಂದಿನ ವಾರ ಗಳಿಕೆಯಾಗಿದ್ದ ದರ ಇಳಿಕೆಯಾಗಿದೆ.